ಅಧ್ಯಯನ ವರದಿ ನೀಡಲು National Institute of Technology, Karnataka (NITK) ಸುರತ್ಕಲ್ ಇವರನ್ನು ಕೋರಲಾಗಿದೆ

ಈ) Feasibility ಅಧ್ಯಯನ ವರದಿ ಬಂದ ನಂತರ ಪರಿಶೀಲಿಸಲಾಗುವುದು

914(1080) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರದ ಅರಬ್ಬೀ ಸಮುದ್ರ ದಂಡೆಯ ಭೂ ಪ್ರದೇಶವು ಪ್ರತಿ ವರ್ಷ ಮಳೆಗಾಲದಲ್ಲಿ ಸಮುದ್ರ ಕೊರೆತದ ಹಾನಿ ಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಅವಾರ ಪ್ರಮಾಣದ ಭೂ ಪ್ರದೇಶ ಕೊರೆತವನ್ನು ತಡೆಗಟ್ಟಲು ಅಗತ್ಯ ಇರುವ ಎಲ್ಲಾ ಕಡೆಗಳಲ್ಲಿ ತಡೆಗೋಡೆ ನಿರ್ಮಾಣಕ್ಕೆ ವಿಸ್ತೃತ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುವುದು,

ಇ) ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಕುಮಟಾ ವಿಧಾನ ಸಭಾ ಕ್ಷೇತ್ರದ 43 ಕಿ ಮೀ ಕರಾವಳಿ ತೀರದ ಪೈಕಿ ಸುಮಾರು 31 ಕಿ ಮೀ ಕರಾವಳಿ ಪ್ರದೇಶ ಸಮುದ್ರದ ಕೊರೆತಕ್ಕೆ ಒಳಗಾಗುತ್ತಿದೆ ಈ ಪೈಕಿ 9 ಕಿ ಮೀ ಪ್ರದೇಶದಲ್ಲಿ ರೂ 41 00 ಕೋಟಿ ಅಂದಾಜು ವೆಚ್ಚದಲ್ಲಿ Central Water & Power Research Station (C W P R S), Pune ಇವರು ನೀಡಿರುವ ವಿನ್ಯಾಸದಂತೆ ಕಲ್ಲಿನಿಂದ ತಡೆಗೋಡೆಯನ್ನು ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ (National Coastal Protection Project) ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ

ಇ) ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯು (National Coastal Protection Project) ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಕೇಂದ್ರ ಸರ್ಕಾರವು ಮಂಜೂರು ನೀಡಿದ ಕೂಡಲೇ ಕಾಮಗಾರಿಯನ್ನು ಮಾಡಿ ಕೈಗೊಳ್ಳಲಾಗುವುದು